

# ‘ನನ್ನ ತೆಪ್ಪು ಹೊಟ್ಟೇಲಿ ಹಾಕ್ಕೊಳ್ಳಿ..’

ಕೆಂಪಣ್ಣ, ತಾವೂ ನಕ್ಕು, ‘... ಸರಿ, ಹೊತ್ತಾಗ್ತಿದೆ... ಪ್ರಸಾದಪ್ಪ, ಹೋಗಿ ಗಂಗೆಯ ಬಾಯಿ ಬಿಡ್ಸಪ್ಪಾ...’

ಪ್ರಸಾದ ಕುರ್ಚಿಯಿಂದ ಎದ್ದು, ನಿಧಾನದಲ್ಲಿ ಹೋಗಿ ಗಂಗೆ ಮುಂದೆ ನಿಂತು, ಬಾಗಿಕೊಂಡು ಉಸುರಿದ,

‘ಗಂಗಾ...’ ಅವನ ದೃಷ್ಟಿ ಅವಳ ತೆರೆದ ಕಣ್ಣಿನೊಳಕ್ಕೆ ತೂರಿ ಹೋಯಿತು... ‘ಗಂಗಾ... ಇಲ್ನೋಡು... ಇಲ್ಲಿರುವ ಹಿರಿಯರು ನಮ್ಮಲ್ಲಿ ನಂಬಿಕೆ ಇಟ್ಟಿದ್ದಾರೆ. ನಿನಗೆ ಒಳಿತು ಮಾಡಲು ನಿಶ್ಚಯಿಸಿದ್ದಾರೆ... ಈಗ ಹೇಳ್ಬಿಡ್ತಿಯಾ?... ಕೂಸಿನ ತಂದೆ ಬಗ್ಗೆ ಹೇಳ್ತೀಯಾ...? ಎಷ್ಟೊಂತ ನಿಜ ಸ್ಥಿತಿ ಅದುಮಿಡೋಕೆ ಸಾಧ್ಯ?...